**ಪಾಠ 8** **ನವೆಂಬರ್ 17 – 23**

# ವಿಶ್ವಾಸದಲ್ಲಿ ನಂಬಿಕೆಯ ಐಕ್ಯತೆ



## ಸಬ್ಬತ್ತಿನ ಮಧ್ಯಾಹ್ನ

**ಈ ವಾರದ ಅಧ್ಯಾನಕ್ಕಾಗಿ ಓದಿರಿ: ಅ.ಕೃ 4:8–12; ಅ.ಕೃ 1:11; ಮತ್ತಾಯ 25:1–13, ಇಬ್ರಿಯ 9:11–12, ವಿಮೋ 20:8–11, 1ಕೊರಿಂಥ 15:51–54**

**ಸ್ಮರಣ ವಾಕ್ಯ– ಬರಬೇಕಾದ ರಕ್ಷಣೆಯು ಇನ್ನಾರಲ್ಲಿಯೂ ಸಿಕ್ಕುವುದಿಲ್ಲ ಆ ಹೆಸರಿನಿಂದಲೇ ಹೊರತು ಆಕಾಶದ ಕೆಳಗೆ ಮನುಷ್ಯರೊಳಗೆ ಕೊಡಲ್ಪಟ್ಟಿರುವ ಬೇರೆ ಯಾವ ಹೆಸರಿನಿಂದಲೂ ನಮಗೆ ರಕ್ಷಣೆಯಾಗುದಿಲ್ಲ ಎಂದು ಹೇಳಿದನು. ಅ.ಕೃ** 4:12.

ಕೆಲವು ಮುಖ್ಯಾವಾದ ಸತ್ಯವೇದ ವಾಕ್ಯಗಳ ವ್ಯಾಖ್ಯನದ ಬಗ್ಗೆ 1888ರಲ್ಲಿ ಸವೆಂತ್–ಡೇ–ಅಡ್ವೆಂಟಿಸ್ಟ್ ಸಭೆಯು ಕೆಲಕಾಲ ತೀವ್ರವಾದ ಚರ್ಚೆ ಮಾಡಿತ್ತು. ಹೀಗೆ ಕೆಲವು ಬೋಧಕರು ಮತ್ತು ಸಭೆಯ ನಾಯಕರು ಚರ್ಚೆ ಮಾಡುತ್ತರುವಾಗ ದಾನಿಯೇಲನ ಪ್ರವಾದನೆ 7ರಲ್ಲಿ ಅವರು ಹತ್ತು ಕೊಂಬುಗಳು ಮತು ಗಲಾತ್ಯ 3:24ರಲ್ಲಿ ಧರ್ಮಶಾಸ್ತ್ರವನ್ನು ಗುರುತಿಸಿದರು. ಒಬ್ಬರಿಗೊಬ್ಬರಲ್ಲಿದ್ದ ವಿರುದ್ಧ ಮನೋವೃತ್ತಿಯು ಹೇಗೆ ಅನ್ಯೊನ್ಯತೆಯನ್ನು ಸ್ನೇಹವನ್ನು ಹಾಳು ಮಾಡಿ ಸಭೆಯ ಧ್ಯೇಯ ಮತ್ತು ಐಕ್ಯತೆಯನ್ನು ನಾಶ ಮಾಡಿತು. ಎಲ್ಲೆನ್ ಜಿ ವೈಟ್ ಈ ಪರಿಸ್ಥತಿಯಿಂದ ದುಃಖಿತರಾಗಿ ಇಂಥ ಚರ್ಚೆಯಲ್ಲಿ ಭಾಗಿಯಾದವರಿಗೆ ಯೇಸುವಿನ ಸಂಬಂಧದಲ್ಲಿ ಎಚ್ಚರಿಕೆಯಿಂದ ಇರಬೇಕೆಂದು ಪ್ರೋತ್ಸಾಹಿಸುತ್ತಾರೆ. ನಾವು ಒಪ್ಪದಿದ್ದ ಸಮಯಲ್ಲಿ ನಮ್ಮ

ಚಾರಿತ್ರ್ಯದ ಮೂಲಕ ನಮಗೆ ಯೇಸುವಿನಲ್ಲಿ ಇರುವ ಪ್ರೀತಿಯನ್ನು ಹೇಗೆ ತೋ-ರಿಸಬೇಕೆಂದು ಒಪ್ಪುವರೆಂದು ನರೀಕ್ಷಿಸಬಾರದು.

ಅಗತ್ಯವಿರುವ ಅಡ್ವೆಂಟಿಸ್ಟ್ ನಂಬಿಕೆಗಳ ಬಗ್ಗೆ ಒಂದಾಗಿ ಅರ್ಥಮಾಡಿಕೊಳ್ಳಬೇಕು ಎಂದು ಆಕೆಯು ಹೇಳುತ್ತಾಳೆ (ಎಲೆನ್ ಜಿ ವೈಟ್, ಕೌನ್ಸಿಲ ಟು ರೈಟರ್ಸ್ ಅಂಡ್ ಎಡಿಟರ್ಸ್" ಪು. 28-32) ಈ ವಾರ ಅಗತ್ಯವಾದ ಸತ್ಯವೇದದ ಬೋಧನೆಗಳ ಬಗ್ಗೆ ನೋಡುತ್ತೇವೆ. ಅದು ಅಡ್ವೆಂಟಿಸ್ಟ್‌ರಾದ ನಮ್ಮ ನಂಬಿಕೆಯಲ್ಲಿ ಐಕ್ಯತೆಯನ್ನು ರೂಪಿಸುತ್ತದೆ.

**ಭಾನುವಾರ** **ನವೆಂಬರ್** 18

**ಯೇಸುವಿನಲ್ಲಿ ರಕ್ಷಣೆ**

ಸವೆಂತ್-ಡೇ-ಅಡ್ವೆಂಟಿಸ್ಟ್‌ರಾದ ನಾವು ಸಹ ಬೇರೆ ಕ್ರೈಸ್ತರಂತೆ ಯದ್ದೇವೆ ನಮ್ಮ ಸತ್ಯವೇದದ ಸತ್ಯದ ನಂಬಿಕೆಗಳನ್ನು ನಮ್ಮಂತೆ ಜಗತ್ತಿನಲ್ಲೇ ಬೇರೆ ಯಾವ ಕ್ರೈಸ್ತರು ಪ್ರಚಾರ ಮಾಡುತ್ತಿಲ್ಲ. ಈ ಸತ್ಯವು ನಮ್ಮನ್ನು ಕೊನೆ ಕಾಲದ ಉಳಿದ ದೇವರ ಮಕ್ಕಳೆಂದು ಪರಿಗಣಿಸಲು ಸಹಾಯಕವಾಗಿದೆ.

**ಅ.ಕೃ. 4:8-12, 10:43 ಓದಿರಿ: ರಕ್ಷಣೆ ಯೋಜನೆಯಲ್ಲಿ ಯೇಸು ಕ್ರಿಸ್ತನಿಗೆ ಪೇತ್ರನು ಅರ್ಥ ಮಾಡಿಕೊಂಡಿರುವ ಪ್ರಕಾರ ಯಾವ ಮುಖ್ಯವಾದ ಸ್ಥಾನವನ್ನು ಕೊಟ್ಟಿದ್ದಾನೆ?**

-----------------------------------------------

-----------------------------------------------

ಅಪೊಸ್ತಲನಾದ ಪೌಲನು ಕೊರಿಂಥದವರಿಗೆ ಯಾವ ಶುಭ ಸಂದೇಶವನ್ನು ತಿಳಿಸಿದನೆಂದರೆ "ದೇವರು ಮನುಷ್ಯರ ಅಪರಾಧಗಳನ್ನು ಅವರ ಲೆಕ್ಕಕ್ಕೆ ಹಾಕದೆ ಲೋಕವನ್ನು ಕ್ರಿಸ್ತನಲ್ಲೆ ತನಗೆ ಸಮಾಧಾನ ಪಡಿಸಿಕೊಳ್ಳುತ್ತದೆಯಂಬದೇ: (2ಕೋ-ರಿಂಥ 5:19)ಕ್ರಿಸ್ತನ ಮರಣವು ನಮ್ಮನ್ನು ಮತ್ತು ದೇವರೊಂದಿಗೆ ಮರುಮೈತ್ರಿಯನ್ನು ತಂದಿದೆ. ಅದು ಪಾಪ ಮತ್ತು ಮರಣದಿಂದಾದ ದೊಡ್ಡ ಬಿರುಕಿಗೆ ಸೇತುವೆಯಾಗಿದೆ. ಶತಮಾನಗಳಿಂದಲೂ ಕ್ರೈಸ್ತರು ಕ್ರಿಸ್ತನ ಮರಣ, ಪುನರುತ್ಥಾನ ಮತ್ತು ಆತನು ಮರುಮೈತ್ರಿಯನ್ನು ನೇರವೇರಿಸುವದಕ್ಕೆ ಬಂದದ್ದರ ಅರ್ಥದ ಬಗ್ಗೆ ವಿಚಾರಮಾಡಿರಬಹುದು. ಮರುಮೈತ್ರಿ ಕಾರ್ಯವಿಧಾನವನ್ನು (ರಾಜಿ/ ಸಂಧಾನ/ ಪ್ರಾಯಶ್ಚಿತ್ತ) ಎಂದು ಕರೆಯುತ್ತಾರೆ, ಇದರ ಅರ್ಥ ಒಂದಾಗು ಅಥವಾ ಒಪ್ಪಂದದಲ್ಲಿ ಒಂದಾಗು, ಎಂಬುದು. ಸಂಧಾನವು ಸಂಬಂಧದಲ್ಲಿ ಐಕ್ಯವನ್ನು ಸೂಚಿಸುತ್ತದೆ ಮತ್ತು

ಅಗಲಿಕೆಯಲ್ಲಿ ಈ ಐಕ್ಯವೇ ಮರುಮೈತ್ರಿಯ ಫಲವಾಗಿದೆ. ಮರುಮೈತ್ರಿಯ ವರವೇ ಸಭೆಯ ಐಕ್ಯತೆ.

**ಯೇಸುವಿನ ಮರಣ, ಪುನರುತ್ಥಾನದ ಅರ್ಥದ ಬಗ್ಗೆ ಕೆಳಗಿನ ವಾಕ್ಯವೃಂದದಲ್ಲಿ ಏನನ್ನು ತಿಳಿಸುತ್ತದೆ?**

**ರೋಮಾ** 3:24,25 ________________________________

1 **ಯೋಹಾನ** 2:2 ________________________________

1 **ಯೋಹಾನ** 4:9,10 ______________________________

1 **ಪೇತ್ರ** 2:21–24 ______________________________

ಬೇರೆ ಕ್ರೈಸ್ತರಿಂದ ಕ್ರಿಸ್ತನ ಮರಣ ಮತ್ತು ಪುನರುತ್ಥಾನದ ನಂಬಿಕೆಯನ್ನು ನಾವು ಸಹ ಎತ್ತಿ ಹಿಡಿದಿದ್ದೇವೆ. ಆದರೆ ನಾವು ಶಾಶ್ವತವಾದ/ ನಿತ್ಯವಾದ ಸುವಾರ್ತೆಯಿಂದ ಪ್ರಚಾರ ಮಾಡುತ್ತೇವೆ. ಇದು ಮೂರು ದೇವದೂತರ ಸಂದೇಶದ ಭಾಗವಾಗಿದೆ(ಪ್ರಕಟನೆ 14:6–12). ಸವೆಂತ್–ಡೇ–ಅಡ್ವೆಂಟಿಸ್ಟ್‌ರಾದ ನಾವುಗಳು ಈ ಸಂದೇಶಗಳಿಗೆ ಪ್ರಾಮುಖ್ಯತೆ ಕೊಡುತ್ತೇವೆ ಆದರೆ ಬೇರೆ ಕ್ರೈಸ್ತರು ಕೊಡುವುದಿಲ್ಲ.

**ಕ್ರಿಸ್ತನ ಮರಣ ಮತ್ತು ಪುನರುತ್ಥಾನದ ಸತ್ಯ ಮತ್ತು ಅದು ನೀಡುವ ಭರವಸೆಯನ್ನು ಎಲ್ಲಾ ಸಮಯದಲ್ಲೂ ನಿಮ್ಮ ಮುಂದೆಯೇ ಇಟ್ಟುಕೊಳ್ಳುವದನ್ನುಹೇಗೆ ಕಲಿಯುವಿರಿ?**

**ಸೋಮವಾರ** **ನವೆಂಬರ್** 19

**ಕ್ರಿಸ್ತನ ಎರಡನೇ ಬರೋಣವು**

ಕ್ರಿಸ್ತನ ಎರಡನೇ ಬರೋಣವನ್ನು ಅಪೊಸ್ತಲರು ಮತ್ತು ಆದಿ ಕ್ರೈಸ್ತರು "ಭಾಗ್ಯಕರವಾದ ನಿರೀಕ್ಷೆ/ ಆಶೀರ್ವಾದ ಭರವಸೆ." ಅವರು ಎಲ್ಲಾ ಪ್ರವಾದನೆಗಳು ಮತ್ತು ಸತ್ಯವೇದದಲ್ಲಿನ ವಾಗ್ದಾನಗಳು ಆತನ ಎರಡನೇ ಬರೋಣದಲ್ಲಿ ನೆರವೇರುವವೆಂದು ನಿರೀಕ್ಷಿಸಿದರು. ಅಡ್ವೆಂಟಿಸ್ಟ್‌ರು ಇಂದಿಗೂ ದೃಢ ನಿಶ್ಚಯದಿಂದ್ದಾರೆ. ಅಡ್ವೆಂಟಿಸ್ಟ್‌ರು ಎಂಬ ಹೆಸರಿನಲ್ಲಿಯೇ ಸ್ಪಷ್ಟವಾಗಿದೆ. ಕ್ರಿಸ್ತನನ್ನು ಪ್ರೀತಿಸುವ ಎಲ್ಲರೂ ಒಂದು ದಿನ ಆತನೊಂದಿನ ಮುಖಾಮುಖಿಯಾಗಿ ಅನ್ಯೊನ್ಯಯಲ್ಲಿ ಇರುವುದನ್ನು ಎದುರುನೋಡುತ್ತಾರೆ. ಆ ದಿನದವರೆಗೂ ದೇವರ ಮಕ್ಕಳಾದ ನಮ್ಮ ಮೇಲೆ ಕ್ರಿಸ್ತನ ಎರಡನೇ ಬರೋಣ ವಾಗ್ದಾನವು ಏಕೀಕರಿಸುವ ಪ್ರಭಾವವನ್ನು ಉಂಟುಮಾಡುತ್ತದೆ.

**ಕ್ರಿಸ್ತನ ಎರಡನೇ ಬರೋಣ ರೀತಿಯನ್ನು ಈ ವಾಕ್ಯವೃಂದಗಳು ಏನನ್ನು ತಿಳಿಸುತ್ತವೆ. ಕ್ರಿಸ್ತನ ಬರೋಣ ಖ್ಯಾತ ಕಲ್ಪನೆಗಳಿಂದ ಇವು ಹೇಗೆ ವತ್ಯಾಸವಾಗಿವೆ? ಅ.ಕೃ 1:11; ಮತ್ತಾಯ 24:26,27; ಪ್ರಕಟನೆ 1:7; ಥೆಸಯೋನಿಕ 4:13–18; ಪ್ರಕಟನೆ 19:11–16.**

______________________________________________________________________

______________________________________________________________________

______________________________________________________________________

ತನ್ನ ಮಕ್ಕಳನ್ನು ಕರೆದುಕೊಂಡು ಹೋಗಲು ಕ್ರಿಸ್ತನ ಎರಡನೇ ಬರೋಣ ಬಗ್ಗೆ ಸತ್ಯವೇದ ಪದೇ ಪದೇ ಆಶ್ವಾಸನೆ ನೀಡುತ್ತದೆ. ಈ ಘಟನೆಯು ಯಾವಾಗ ನಡೆಯುತ್ತದೆ ಎಂಬ ವಿಷಯವು ಯಾವ ಉಹಾಪೋಹಗಳಿಗೆ ಎಡೆ ಮಾಡಿಕೊಡಬಾರದು ಏಕೆಂದರೆ ಯೇಸು ತಾನು ಹೇಳುತ್ತಾನೆ "ಇದಲ್ಲದೆ ಆ ದಿನದ ವಿಷಯವೂ ಆ ಘಳಿಗೆಯ ವಿಷಯವು ನನ್ನ ತಂದೆಯೊಬ್ಬನಿಗೆ ತಿಳಿಯುವದೆ ಹೊರೆತು ಮತ್ತಾರಿಗೂ ತಿಳಿಯದು ಪರಲೋಕದಲ್ಲಿರುವ ದೂತರಿಗೂ ತಿಳಿಯದು ಮಗನಿಗೂ ತಿಳಿಯದು" (ಮತ್ತಾಯ 24:36). ಕ್ರಿಸ್ತನು ಯಾವಾಗ ಬರುತ್ತಾನೆ ಎಂಬುದು ನಮಗೆ ಗೊತ್ತಿಲ್ಲ. ಆತನು ಯಾವಾಗ ಬರುತ್ತಾನೆ ಗೊತ್ತಾಗದು/ತಿಳಿಯದು ಎಂದು ಹೇಳಲಾಗಿದೆ. ಆತನ ಸುವಾರ್ತೆಯ ಕೊನೆಯ ದಿನಗಳಲ್ಲಿ ಯೇಸು ಹತ್ತು ಕನ್ಯೆಯರ ಸಾಮ್ಯವನ್ನು ಹೇಳಿದನು(ಮತ್ತಾಯ 25:1–13). ಸಬೆಯು ಆತನ ಎರಡನೇ ಬರೋಣಕೋಸ್ಕರ ಎದುರುನೋಡುತ್ತಿರುವ ಅನುಭವವನ್ನು ವಿವರಿಸಿದ್ದಾನೆ.

ಎರಡು ಗುಂಪುಗಳ ಕನ್ಯೆಯರು ಎರಡು ವಧವಾದ ನಂಬಿಗಸ್ತರನ್ನು ಬಿಂಬಿಸುತ್ತದೆ. ಅವರು ಯೇಸುವಿನ ಬರೋಣಕ್ಕಾಗಿ ಕಾಯುವವರಾಗಿದ್ದಾರೆ. ಈ ಎರಡು ಗುಂಪುಗಳು ಒಂದೇ ರೀತಿಯಾಗಿ ಕಾಣಿಸುತ್ತವೆ, ಆದರೆ ಯೇಸುವಿನ ಬರೋಣವು ತಡವಾದಾಗ ಅವರಲ್ಲಿ ನಿಜವಾದ ವತ್ಯಾಸವು ಸ್ಪಷ್ಟವಾಗುತ್ತದೆ. ಒಂದು ಗುಂಪು ಬರೋಣವು ತಡವಾದರೂ ಅವರು ಭರವೆಸೆಯಿಂದಿದ್ದರು ಮತ್ತು ಬೇಕಾದ ಆತ್ಮೀಕ ತಯಾರಿ ಮಾಡಿಕೊಂಡಿದ್ದರು. ಯೇಸು ತನ್ನ ಶಿಷ್ಯರಿಗೆ ಕ್ರೈಸ್ತರ ಅನುಭವಗಳು ಅವರ ಭಾವನಾತ್ಮಕ ಉದ್ರೇಶದಿಂದ ಅಥವಾ ಹುಮ್ಮಸ್ಸಿನ/ಉತ್ಸಾಹದ ಮೇಲೆ ಆಧಾ–ರಿತವಾಗಬಾರದು, ಆದರೆ ದೇವರ ಕೃಪೆಯಲ್ಲಿ ಸತತವಾಗಿ ಅವಲಂಬಿಸಿರಬೇಕು ಮತ್ತು ದೇವರ ವಾಗ್ದಾನವು ನೇರವೇರುವ ಬಗ್ಗೆ ಈಗಲೂ ನಮ್ಮನ್ನು ಆಹ್ವಾನಿಸುತ್ತಿದ್ದಾನೆ. ನಾವು ಆತನ ಬರೋಣಕ್ಕೆ ಸಿದ್ದರಾಗಿದ್ದು ಕಾಯ್ದುಕೊಂಡಿರಬೇಕು.

**ಆತನ ಬರೋಣವು ನಮಗೆ ಎಷ್ಟು ನಿರ್ಣಾಯಕ ಎಂಬುದಕ್ಕೆ ಸವೆಂತ್–ಡೇ–ಅಡ್ವೆಂಟಿಸ್ಟ್ ಎಂಬ ಹೆಸರು ಅದಕ್ಕೆ ಸಾಕ್ಷಿಯಾಗಿದೆ. ವೈಯಕ್ತಿಕವಾಗಿ ನಾವು ಎರಡನೇ ಬರೋಣ ಸತ್ಯವನ್ನು ನಮ್ಮ ಮುಂದಯೇ ಇಟ್ಟುಕೊಳ್ಳಬೇಕು. ವರ್ಷಗಳು ಕಳೆದಂತೆ ಹತ್ತು ಕನ್ಯೆಳ ಸಾಮ್ಯದ ಮೂಲಕ ನಾವು ಅದೇ ತಪ್ಪು ಮಾಡಬಾರದೆಂದು ಯೇಸುವು ಎಚ್ಚರಿಕೆ ನೀಡುತ್ತಾನೆ.**

**ಮಂಗಳವಾರ** **ನವೆಂಬರ್ 20**

**ಪರಲೋಕದ ಗುಡಾರದಲ್ಲಿ ಯೇಸುವಿನ ಸೇವೆ**

ಹಳೆಯ ಒಡಂಬಡಿಕೆಯಲ್ಲಿ ದೇವರು ಇಹಲೋಕದಲ್ಲಿ ವಾಸಿಸಿವದಕ್ಕೆ ತನಗೆ ಒಂದು ಗುಡಾರವನ್ನು ಕಟ್ಟಿಸಬೇಕೆಂದು ಆಜ್ಞಾಪಿಸಿದನು (ವಿಮೊ 25:8). ಅದರೆ ಸೇವೆಯ ಮೂಲಕ ಇಸ್ರಾಯೇಲ್ ಜನಾಂಗಕ್ಕೆ ರಕ್ಷಣೆ ಯೋಜನೆ ಬಗ್ಗೆ ಬೋಧಿಸಲಾಯಿತು. ನಂತರ ಅರಸನಾದ ಸೊಲೊಮೋನ್ ಕಾಲದಲ್ಲಿ ಗುಡಾರದ ಬದಲು ಭವ್ಯವಾದ ದೇವಾಲಯವು ಪರಲೋಕದ ಗುಡಾರದ ಮಾದರಿಯಲ್ಲಿ ಇದ್ದವು. ಮನುಷ್ಯನು ಹಾಕದೆ ಕರ್ತನೇ ಹಾಕಿದ ನಿಜವಾದ ದೇವದರ್ಶನ ಗುಡಾರ(ಇಬ್ರಿ 8:2). ಇಡೀ ಸತ್ಯವೇದದಲ್ಲಿ ಪರಲೋಕದಲ್ಲಿ ಗುಡಾರವಿದೆ ಎಂದು ಊಹಿಸಲಾಗಿದೆ ಅದು ದೇವರ ವಾಸಸ್ಥಳವಾಗಿದೆ. ಇಹಲೋಕದ ಗುಡಾರವು ಯೇಸುವಿನ ಪರಲೋಕದಲ್ಲಿನ ಯಾಜಕ ಸೇವೆ ಆತನ ರಕ್ಷಣೆ ಯೋಜನೆಯ ಪ್ರವಾದನೆಗಳ ಸೇವೆಗಾಗಿ ಇದೆ.

**ಇಬ್ರಿ 8:6, 9:11, 12, 23–28 ಮತ್ತು 1 ಯೋಹಾನ 1:9–22, ಈ ವಾಕ್ಯವೃಂದವು ಯೇಸುವಿನ ಪರಲೋಕದ ಯಾಜಕ ಸೇವೆಯು ಬಗ್ಗೆ ತಿಳಿಸುತ್ತದೆ.**

––––––––––––––––––––––––––––––––––––––––––

––––––––––––––––––––––––––––––––––––––––––

––––––––––––––––––––––––––––––––––––––––––

ಆತನ ಮೇಲಕ್ಕೆ ಏರಿಹೋದ ಮೇಲೆ ಪರಲೋಕದ ಗುಡಾರದಲ್ಲಿ ಕ್ರಿಸ್ತನು ನಮ್ಮ ರಕ್ಷಣೆಗಾಗಿ ಯಾಜಕ ಸೇವೆಯಲ್ಲಿ ತೊಡಗಿದ್ದಾನೆ(ಇಬ್ರಿ 7:25). ಆದಕಾರಣ ನಮಗೆ ಪ್ರೋತ್ಸಾಹ ನೀಡಲಾಗಿದೆ "ಆದದರಿಂದ ನಾವು ಕರುಣೆಯನ್ನು ಹೊಂದುವಂತೆಯೂ ಆತನ ದಯೆಯಿಂದ ಸಮಯೋಚಿತವಾದ ಸಹಾಯವು ನಮಗೆ ದೊರೆಯುವಂತೆಯು ಧೈರ್ಯದಿಂದ ಕೃಪಾಸನದ ಮುಂದೆ ಬರೋಣ(ಇಬ್ರಿ 4:16).

ಇಹಲೋಕದ ಗುಡಾರದಲ್ಲಿ ಎರಡು ಹಂತದಲ್ಲಿ ಯಾಜಕ ಸೇವೆ ನಡೆಯುತಿತ್ತು.

ಮೊದಲನೇಯದು ಪ್ರತಿ ದಿನವು ಪರಿಶುದ್ಧ ಸ್ಥಳದಲ್ಲಿ ನಡೆಯುತ್ತಿತ್ತು. ಎರಡನೇಯದು ಪ್ರತಿ ವರ್ಷವು ಮಹಾಪರಿಶುದ್ಧ ಸ್ಥಳದಲ್ಲಿ ಯಾಜಕ ಸೇವೆ ನಡೆಯುತ್ತಿತ್ತು. ಸತ್ಯವೇದ ಈ ಎರಡು ಹಂತ ಪರಲೋಕದಲ್ಲಿನ ಯೇಸುವಿನ ಯಾಜಕ ಸೇವೆಯ ಬಗ್ಗೆ ವಿವ–ರಿಸುತ್ತದೆ. ಪರಿಶುದ್ಧ ಸ್ಥಳದಲ್ಲಿ ಆತನ ಸೇವೆಯನ್ನು ಮಧ್ಯಸ್ಥಿಕೆ, ಪಾಪಕ್ಷಮಾಪಣೆ ಮರುಮೈತ್ರಿ ಮತ್ತು ಮರುಸ್ಥಾಪನೆ ಎಂದು ವಿವರಿಸಲಾಗಿದೆ. ಯಾವನಾದರೂ ಪಾಪ ಮಾಡಿದರೆ ತಂದೆಯ ಬಳಿಯಲ್ಲಿ ನೀತಿವಂತನಾದ ಯೇಸು ಕ್ರಿಸ್ತನೆಂಬ ಸಹಾಯಕನು ನಮಗಿದ್ದಾನೆ (1ಯೋಹಾನ 2:1)

1844 ಇಸವಿಯಿಂದ ಯೇಸುವಿನ ಮಹಾ ಪರಿಶುದ್ಧ ಸ್ಥಳದ ಸೇವೆಯು ನ್ಯಾಯತೀರ್ಪು ಮತ್ತು ಶುದ್ಧೀಕರಣ ವರ್ಷಕೊಮ್ಮೆ ದೋಷಪರಿಹಾರ ಮಹಾದಿನದಂದು ಮಾಡಲಾಗುತ್ತಿತ್ತು (ಯಾಜಕ 16). ಗುಡಾರವನ್ನು ಶುದ್ಧೀಕರಣ ಸೇವೆಯು ಯೇಸುವಿನ ರಕ್ತ ಸುರಿಸಿದ್ದರ ಮೇಲೆ ಆದಾರಿತವಾಗಿದೆ ಕ್ರಿಸ್ತನು ಪಾಪಗಳನ್ನು ತೆಗೆದು ಸಂಪೂರ್ಣ ಮರುಮೈತ್ರಯಿಂದ ಲೋಕವನ್ನು ದೇವರ ರಾಜ್ಯದಲ್ಲಿ ಸಾಮರಸ್ಯವಾಗಿ ಇರಬೇಕೆಂದು ಪ್ರಯತ್ನಿಸಿ ಸಾಧಿಸಬೇಕೆಂಬದಾಗಿದೆ. ಎರಡು ಹಂತದ ಸೇವೆಯ ಸಿದ್ದಾಂತವು ಸಂಪೂರ್ಣ ರಕ್ಷಣೆಯ ಯೋಜನೆಯನ್ನು ಅರ್ಥಮಾಡಿಕೊಂಡ ಅಡ್ವೆಂಟಿಸ್ಟ್‌ರ ಅನನ್ಯ ಕೊಡುಗೆಯಾಗಿದೆ.

**ಬುದವಾರ** **ನವೆಂಬರ್** 21

**ಸಬ್ಬತ್ತು**

ಸವೆಂತ್–ಡೇ–ಅಡ್ವೆಂಟಿಸ್ಟ್‌ರು ನಂಬಿ ಅದನ್ನು ಎತ್ತಿಹಿಡಿಯುವ ನಿರ್ಣಾಯಕ ಸತ್ಯವೇದದ ಬೋಧನೆಯೆಂದರೆ ಏಳನೇ ದಿನವೇ ಸಬ್ಬತ್ತೆಂಬುದು. ಈ ಮುಖ್ಯವಾದ ಸಿದ್ದಾಂತವು. ನಮ್ಮಲ್ಲಿ ಐಕ್ಯತೆ ಮತ್ತು ಅನ್ಯೋನ್ಯತೆಯನ್ನು ತಂದಿದೆ. ಇದನ್ನೊಂದು ಕಡಿಮೆ ನಿರೀಕ್ಷೆಯಿಂದ ನಾವು ಪಾಲಿಸುತ್ತೇವೆ. ಸೃಷ್ಟಿಯ ಸಮಯದಿಂದಲೂ ಮಾನವ–ರಿಗೆ ಸಬ್ಬತ್ತು ದೇವರ ವರವಾಗಿದೆ. ಸೃಷ್ಟಿಯ ಸಮಯದಲ್ಲಿ ಮೂರು ವಿಶಿಷ್ಟವಾದ ದೈವಿಕ ಕಾರ್ಯಗಳು ಸಬ್ಬತ್ತಿನಂದು ನಡೆದವು.

1. ಸಬ್ಬತ್ತಿನ ದಿನದಂದು ದೇವರು ವಿಶ್ರಮಿಸಿದನು
2. ಆ ದಿನವನ್ನು ಆರ್ಶೀವದಿಸಿದನು.
3. ಆ ದಿನವನ್ನು ಪರಿಶುದ್ಧ ದಿನವನ್ನಾಗಿ ಮಾಡಿದನು.

ಈ ಮೂರು ಕ್ರಿಯೆಗಳು ದೇವರ ವಿಶೇಷವಾದ ವರವನ್ನಾಗಿ ಸಬ್ಬತ್ತನ್ನು ಸ್ಥಾಪಿಸಿ ಮಾನವ ಕುಲವು ಪರಲೋಕದ ನಿಜಾಂಶವನ್ನು ಇಹಲೋಕದಲ್ಲಿ ಅನುಭವಿಸುವಂತೆ

ಮತ್ತು ದೇವರ ಆರು ದಿನಗಳ ಸೃಷ್ಟಿಕಾರ್ಯವನ್ನು ದೃಢೀಕರಿಸಿತು. ಪ್ರಸಿದ್ಧ ಗುರು ಅಬ್ರಹಾಮ, ಯೆಹೋಶುವ ಇವರು ಸಬ್ಬತ್ತನ್ನು ಪರಿಶುದ್ಧ ದಿನ ಎಂದು ಕರೆಯುತ್ತಾರೆ. ಆ ದಿನ ದೇವರು ತನ್ನ ಜನರನ್ನು ವಿಶೇಷವಾದ ರೀತಿಯಲ್ಲಿ ಸಂಧಿಸುತ್ತಾನೆ.

ಮಾನವ ಕುಲಕ್ಕೆ ಈ ವಾಕ್ಯವೃಂದಗಳು ಸಬ್ಬತ್ತಿನ ಅರ್ಥದ ಬಗ್ಗೆ ಏನನ್ನು ಬೋಧಿಸುತ್ತವೆ. ವಿಮೋ 20:8–11; ಧರ್ಮೋ 5:12–15; ಯೆಹೆ 20:12–20.

––––––––––––––––––––––––––––––––––––––––––––––––

––––––––––––––––––––––––––––––––––––––––––––––––

ಯೇಸುವಿನ ಉದಾಹರಣೆ 9ಲೂಕ 4:16) ಹಿಂಬಾಲಿಸುವ ಆಸೆಯಿಂದ/ಬಯಕೆಯಿಂದ ಸವೆಂತ್–ಡೇ–ಅಡ್ವೆಂಟಿಸ್ಟ್‌ರು ಏಳನೇ ದಿನವನ್ನು ಸಬ್ಬತೆಂದು ಆಚರಿಸುತ್ತಾರೆ. ಯೇಸುವು ಸಬ್ಬತ್ತಿನ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದ ಮೂಲಕ ಆ ದಿನ ವಿಶ್ರಾಂತಿಯ ದಿನ ಮತ್ತು ಆರಾಧನೆ ದಿನವೆಂದು ತಿಳಿಯುತ್ತದೆ. ಗುಣಪಡಿಸುವ ಆಯಾಮಗಳನ್ನು ತಿಳಿಸಲು ಯೇಸು ಸಬ್ಬತ್ತಿನ ದಿನದಂದು ಕೆಲವು ಅದ್ಭುತ ಕಾರ್ಯಗಳನ್ನು ಮಾಡಿದನು. ಅಪೊಸ್ತಲರು ಮತ್ತು ಆದಿ ಕ್ರೈಸ್ತರು ಯೇಸುವು ಸಬ್ಬತ್ತನ್ನು ಅಳಿಸಲು ಬರಲಿಲ್ಲವೆಂದು ಅರ್ಥ ಮಾಡಿಕೊಂಡರು. ಅವರೇ ಆ ದಿನವನ್ನು ಸಬ್ಬತ್ತಿನ ದಿನವೆಂದು ಆಚರಿಸಿ ಆರಾಧಿಸುತ್ತಿದ್ದರು (ಅ.ಕೃ 13:14,42,44; 16:13; 17:2; 18:4).

ಮತ್ತೊಂದು ಸಬ್ಬತ್ತಿನ ಸುಂದರವಾದ ಆಯಾಮವೆಂದರೆ ನಮ್ಮ ಪಾಪಗಳಿಂದ ಬಿಡುಗಡೆಮಾಡಿರುದಕ್ಕೆ (ಸೂಚನೆ) ಚಿಹ್ನೆಯಾಗಿದೆ. ದೇವರು ಇಸ್ರಾಯೆಲ್ಯರನ್ನು ಗುಲಾಮಗಿರಿಯಿಂದ ಐಗುಪ್ತ ದೇಶದಿಂದ ರಕ್ಷಿಸಿ ತಾನು ವಾಗ್ದಾನ ಮಾಡಿದ ಕಾನಾನ್ ದೇಶಕ್ಕೆ ವಿಶ್ರಾಂತಿಸಿಕೊಳ್ಳಲು ಕಳುಹಿಸಿದಕ್ಕಾಗಿ ಸಬ್ಬತ್ತು ಅದರ ಜ್ಞಾಪಕಾರ್ಥವಾಗಿದೆ. ಇಸ್ರಾಯೇಲ್ಯರು ಪದೇ ಪದೇ ಅವಿಧೇಯರಾಗಿ ವಿಗ್ರಹಾರಾಧನೆ ಮಾಡುತ್ತ ಆ ವಾಗ್ದಾನದ ಕಾನಾನ್ ದೇಶಕ್ಕೆ ಹೋಗಿ ವಿಶ್ರಾಂತಿ ಪಡೆಯಲು ಅನೇಕರು ವಿಫಲವಾದರು. ಅದಾಗ್ಯು ದೇವರು ಈಗಲು ವಾಗ್ದಾನ ಮಾಡುತ್ತಿದ್ದಾನೆ. ಆದದ–ರಿಂದ ದೇವರ ಜನರು ಅನುಭವಿಸುವದಕ್ಕೆ ಇರುವ ಸಬ್ಬತ್ತೆಂಬ ವಿಶ್ರಾಂತಿಯು ಇನ್ನು ಉಂಟು(ಇಬ್ರ 4:9). ಆ ವಿಶ್ರಾಂತಿಯಲ್ಲಿ ಸೇರಲು ಬಯಸುವವರು ಯೇಸು ನೀಡುವ ರಕ್ಷಣೆಯಲ್ಲಿ ನಂಬಿಕೆಯಿಂದ ಪ್ರವೇಶಿಸಬಹುದು. ಸಬ್ಬತ್ತನ್ನು ಅನುಸರಿಸುವುದು ಕ್ರಿಸ್ತನಲ್ಲಿ ಆತ್ಮೀಕ ವಿಶ್ರಾಂತಿಯ ಸಂಕೇತವಾಗಿದೆ. ನಮ್ಮನ್ನು ನಮ್ಮ ಪಾಪಗಳಿಂದ ರಕ್ಷಿಸಿ ನಮಗೆ ನಿತ್ಯಜೀವ ಕೊಡುವದಕ್ಕಾಗಿ ನಾವು ಆತನ ಮೇಲೆ ಅವಲಂಬಿತರಾಗಬೇಕು(ಮತ್ತಾ 11:28–30; ಇಬ್ರ 4:10)

**ಕ್ರಿಸ್ತನು ತನ್ನ ಜನರಿಗೆ ಬಯಸುವ ಹಾಗೇ ಸಬ್ಬತ್ತು ಸ್ಪಷ್ಟವಾದ ರೀತಿಯಲ್ಲಿ ಹೇಗೆ ಐಕ್ಯತೆ ಮತ್ತು ಅನ್ಯೋನ್ಯತೆಯನ್ನು ಅನುಭವಿಸಲು ನಮಗೆ ಸಹಾಯಕವಾಗಿದೆ?**

**ಗುರುವಾರ** **ನವೆಂಬರ್ 22**

**ಮರಣ ಮತ್ತು ಪುನರುತ್ಥಾನ**

ಸೃಷ್ಟಿಯ ಸಮಯದಲ್ಲಿ "ಯೆಹೋವ ದೇವರು ನೆಲದ ಮಣ್ಣಿನಿಂದ ಮನುಷ್ಯನನ್ನು ರೂಪಿಸಿ ಅವನ ಮೂಗಿನಲ್ಲಿ ಜೀವ ಶ್ವಾಸವನ್ನು ಊದಿದನು. ಆಗ ಮನುಷ್ಯನು ಬದುಕುವ ಪ್ರಾಣಿಯಾದನು (ಆದಿ 2:7). ಈ ಮನುಷ್ಯನನ್ನು ಸೃಷ್ಟಿ ಮಾಡಿದ್ದು ಜೀವನವನ್ನು ದೇವರಿಂದ ಪಡೆದದ್ದು ಎಂಬುದು ತಿಳಿಯುತ್ತದೆ. ದೇವರು ಮಾತ್ರ ಎಂದಿಗೂ ಅಮರನು ಎಂದು ಸತ್ಯವೇದವು ತಿಳಿಸುತ್ತದೆ (1ತಿಮೊ 6:16) ಮಾನವ ಹುಟ್ಟಿದಾಗ ಅಮರತತ್ವವನ್ನು ಅವನಿಗೆ ಕೊಟ್ಟಿಲ್ಲ ದೇವರಿಗೆ ಹೋಲಿಸಿದರೆ ಮಾನವನು ಸಾಯುವನು ದೇವರು ಅಮರನು. ನಮ್ಮ ಜೀವವನ್ನು ಸತ್ಯವೇದವು ಹೇಗೆ ಹೋಲಿಕೆ ಮಾಡಿದೆ "ನೀವು ಸ್ವಲ್ಪ ಹೊತ್ತು ಕಾಣಿಸಿಕೊಂಡು ಆಮೇಲೆ ಕಾಣದೆ ಹೋಗುವ ಹಬೆಯಂತಿರುತ್ತೀರಿ(ಯಾಕೋಬ 4:14). ಸಾವಿನಲ್ಲಿ ನಮ್ಮ ಜೀವವು ನಿದ್ರಾವಸ್ಥೆಗೆ ಹೋಗುತ್ತದೆ. ಹುಟ್ಟಿದ ಮನುಷ್ಯ ಸಾವಿಗೆ ಅಧೀನವಾಗಿದ್ದಾನೆ.

ಯೇಸು ಕ್ರಿಸ್ತನ ರಕ್ಷಣೆಯಲ್ಲಿ ನಂಬಿಕೆಯಿರುವವರಿಗೆ ನಿತ್ಯ ಜೀವನವನ್ನು ನೀಡುವನು ಎಂದು ವಾಗ್ದಾನ ಮಾಡಿದ್ದಾನೆ ಮತ್ತು ಸತ್ಯವೇದವು ತಿಳಿಸುವ ಪ್ರಕಾರ ನಿತ್ಯ ಜೀವಕ್ಕೂ ಮೂಲನು ಆಗಿದ್ದಾನೆ. ದೇವರ ಉಚಿತಾರ್ಥವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯ ಜೀವ(ರೋಮಾ 6:23) ಯೇಸು "ಮರಣವನ್ನು ನಿವೃತ್ತಿ ಮಾಡಿ ಸುವಾರ್ತೆಯ ಮೂಲಕ ಜೀವವನ್ನು ನಿರ್ಲಯತ್ವವನ್ನು ಪ್ರಕಾಶಗೊಳಿಸಿದನು (3 ತಿಮೊ 1:10). ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು. ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯ ಜೀವನವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು(ಯೋಹಾನ 3:16). ಹಾಗಾಗಿ ಮರಣದ ನಂತರ ಜೀವ ಇರುವುದು ಎಂಬ ಭರವಸೆ ಇದೆ.

**1 ಕೊರಿಂಥ 15:51–54; ಮತ್ತು 1 ಥೆಸಲೋನಿಕ 4:13–18 ಓದಿರಿ: ಈ ವಾಕ್ಯವೃಂದವು ಮರಣದನಂತರ ಜೀವದ ಬಗ್ಗೆ ತಿಳಿಸುತ್ತದೆ ಮತ್ತು ಮಾನವನಿಗೆ ಯಾವಾಗ ನಿತ್ಯ ಜೀವನವನ್ನು ಕೊಡಲಾಗುವುದು?**

ಅಪೊಸ್ತಲನಾದ ಪೌಲನು ಸ್ಪಷ್ಟವಾಗಿ ಹೇಳುತ್ತಾ, ದೇವರು ಮನುಷ್ಯ–ರಿಗೆ ನಿತ್ಯ ಜೀವನವನ್ನು ಮರಣಹೊಂದಿದ ತಕ್ಷಣ ಕೊಡುವುದಿಲ್ಲ. ಆದರೆ ಪುನರುತ್ಥಾನದ ಸಮಯದಲ್ಲಿ ಕೊನೆಯ ತುತ್ತೂರಿಯ ಶಬ್ದವಾದಾಗ ಕೊಡುವನು. ಆದರೆ ನಂಬುವವರು ನಿತ್ಯಜೀವದ ವಾಗ್ದಾನವನ್ನು ಯೇಸುವನ್ನು ತಮ್ಮ ರಕ್ಷಕನಾಗಿ ಅಂಗೀಕರಿಸಿದ ತಕ್ಷಣ ಪಡೆಯುವರು. ನಿತ್ಯ ಜೀವವು ಪುನರುತ್ಥಾನದ ಸಮಯದಲ್ಲಿ ಕೊಡಲ್ಪಡುವದು. ಮರಣದ ನಂತರ ಆತ್ಮವು ಪರಲೋಕಕ್ಕೆ ಹೋಗುವುದು ಎಂಬುದರ ಬಗ್ಗೆ ಹೊಸ ಒಡಂಬಡಿಕೆಯಲ್ಲಿ ತಿಳಿಸಿಲ್ಲ. ಇದು ಪುರಾತನ ಗ್ರೀಕರ ತತ್ವವಾಗಿ ಮತ್ತು ವಿಗ್ರಹಾರಾಧಕರ ಬೋಧನೆಯಾಗಿದೆ. ಇದು ಹಳೆಯ ಅಥವಾ ಹೊಸ ಒಡಂಬಡಿಕೆಯಲ್ಲಿ ಎಲ್ಲಿಯೂ ತಿಳಿಸಿಲ್ಲ ಅಥವಾ ಬರೆದಿಲ್ಲ.

**ಮರಣದ ಬಗ್ಗೆ ನಮಗಿರುವ ತಿಳುವಳಿಕೆಯು ಎರಡನೇ ಬರೋಣದ ವಾಗ್ದಾನವನ್ನು ಶ್ಲಾಘಿಸುವದಕ್ಕೆ ಹೇಗೆ ಸಹಾಯಕವಾಗಿದೆ? ಒಂದು ನಂಬಿಕೆಯ ಸವೆಂತ್–ಡೇ–ಅಡ್ವೆಂಟಿಸ್ಟ್‌ರಾದ ನಮ್ಮನ್ನು ಬಲವಾಗಿ ಒಂದುಗೂಡಿಸುತ್ತದೆ?**

**ಶುಕ್ರವಾರ** **ನವೆಂಬರ್ 23**

**ಎಲ್ಲೆನ್ ಜಿ ವೈಟ್ "ದಿ ಫೌಂಡೇಷನ್ ಆಂಡ್ ಲ್ಯಾಂಡ್ ಮಾರ್ಕಸ್" ಪು. 28–32; ಕೌನ್ಸಲ್ಸ್ ಟೂ ರೈಟರ್ಸ್, ಎಲ್ಲೆನ್ ಜಿ ವೈಟ್; ಎನ್‌ಸೈಕ್ಲೋಪಿಡಿಯಾ ಪು. 770–779ದಲ್ಲಿ ಇರುವ ಲೇಖನದ ಮಹತ್ವ ಮತ್ತು ತತ್ವಗಳನ್ನು ಓದಿರಿ.**

ಸವೆಂತ್–ಡೇ–ಅಡ್ವೆಂಟಿಸ್ಟ್‌ರಾದ ನಮ್ಮ ಮತ್ತು ಬೇರೆ ಸಭೆಯ ಕ್ರೈಸ್ತರ ಮಹತ್ವದ ನಂಬಿಕೆಗಳುಒಂದಾಗಿವೆ. ಅದರಲ್ಲಿ ಮುಖ್ಯವಾದದೆಂದರೆ, ಪಾಪ ಪರಿಹಾರಕ್ಕಾಗಿ ಯೇಸುವಿನ ಮರಣದಲ್ಲಿ ನಂಬಿಕೆ ಇಟ್ಟು ಅದರ ಮೂಲಕ ಮಾತ್ರ ರಕ್ಷಣೆ ಉಂಟು ಎಂಬುವದರಲ್ಲಿ ವಿಶ್ವಾಸವಿಡುವುದಾಗಿದೆ ನಮ್ಮ ನೀತಿವಂತಿಕೆಯು ನಮ್ಮ ಕೆಲಸಗಳ ಮೂಲಕ ಸಿಗುವುದಿಲ್ಲ ಆದರೆ ಕ್ರಿಸ್ತನ ನೀತಿವಂತಿಕೆಯಲ್ಲಿ ಎಂಬುದನ್ನು ನಾವು ಮತ್ತು ಬೇರೆ ಕ್ರೈಸ್ತರ ನಂಬುತ್ತೇವೆ. ಅಥವ ಎಲ್ಲೆನ್ ಜಿ ವೈಟ್ ಪ್ರಸಿದ್ಧವಾದ ಬರವಣಿಗೆ ಹೇಗಿ ಬರೆದಿದ್ದಾರೆ, "ನಮ್ಮ ಪಾಪಗಳಿಗಾಗಿ ಆತನನ್ನು ಶಿಕ್ಷಿಸಿದರು. ಅದರಲ್ಲಿ ಅವರದೇನು ಪಾಲ ಇರಲಿಲ್ಲ. ಅವರ ನೀತಿಯ ಮೂಲಕ ನಾವು ನೀತಿವಂತರಾದೆವು, ಇದರಲ್ಲಿ ನಮ್ಮ ಪಾಲು ಏನು ಇಲ್ಲ. ನಾವು ಮರಣ ಹೊಂದಬೇಕಿತ್ತು, ಆದರೆ ಆತನು ನಮಗೆ ನಿತ್ಯಜೀವ ಸಿಗಲಿ ಎಂದು ಆತನು ನಮಗೋಸ್ಕರ ಮರಣ ಹೊಂದಿದ. ಅದೇ

ಸಮಯದಲ್ಲಿ ಒಟ್ಟಾರೆ ತೆಗೆದುಕೊಂಡರೆ ನಮ್ಮ ಮೂಲ ನಂಬಿಕೆಗಳು ಸಂಪ್ರದಾಯಗಳು ಮತ್ತು ಆ ನಂಬಿಕೆಯಿಂದ ಬದಲಾದ ಜೀವನಶೈಲಿಯು ನಮ್ಮನ್ನು ಬೇರೆ ಕ್ರೈಸ್ತ–ರಿಗಿಂಥ. ಅದು ಇದೆ ರೀತಿಯಲ್ಲಿ ಇರಬೇಕು, ಇಲ್ಲವಾದರೆ ನಾವು ಏಕೆ ಸವೆಂತ್–ಡೇ–ಅಡ್ವೆಂಟಿಸ್ಟ್‌ರಾಗಿ ಇರಬೇಕು? ಯೇಸುವಿನಗೋಸ್ಕರ ನಮ್ಮ ಪ್ರೀತಿ ಮತ್ತು ನಾವು ಪ್ರಚಾರ ಮಾಡುತ್ತಿರುವ ಬೋಧನೆಗಳು ನಮ್ಮನ್ನು ಒಂದುಗೂಡಿಸುವ ಬಲವಾದ ಅಂಶವಾಗಬೇಕು.

**ಚರ್ಚೆಯ ಪ್ರಶ್ನೆಗಳು:**

1. ಫೇತ್ ಅಂಡ್ ವರ್ಕ್ಸ್ ಪು. 103ರಲ್ಲಿ ಎಲ್ಲೆನ್ ಜಿ ವೈಟ್‌ಮ್ಮನವರು ಪಾಪ ಕ್ಷಮಾಪಣೆಯ ಮತ್ತು ಸಮರ್ಥನೆಯನ್ನು ಎರಡು ಸಮಾನವೆಂದು ಪರಿಗಣಿಸಿದ್ದಾರೆ. ಕ್ರಿಸ್ತನಲ್ಲಿ ನಮ್ಮ ಕ್ಷಮಾಪಣೆಯು ಮತ್ತು ಸಮರ್ಥನೆಯು ಸಮುದಾಯದಲ್ಲಿ ಸಹೋದರ ಮತ್ತು ಸಹೋದರಿಯರೊಂದಿಗೆ ಅನ್ಯೋನ್ಯತೆಯಿಂದ ಇರುವುದಕ್ಕೆ ತಳಹದಿ ಎಂಬುದನ್ನು ಹೇಗೆ ನಾವು ಗಣನೆಗೆ ತರಬೇಕು?

2. ಸಭೆಯು ಐಕ್ಯತೆಯಲ್ಲಿ ಇರುವುದಕ್ಕೆ ನಮ್ಮ ತತ್ವಗಳ ಎಷ್ಟು ಮುಖ್ಯ ಎಂಬುದರ ಬಗ್ಗೆ ಚಿಂತಿಸಿ? ಇದು ತಾನೇ ಒಂದೇ ತತ್ವ ನಂಬಿಕೆಯುಳ್ಳರಾದದಲ್ಲದೆ ಬೇರೆ ಬೇರೆ ಜನಾಂಗ, ಧರ್ಮ, ರಾಜಕೀಯ ಮತ್ತು ಸಾಂಸ್ಕೃತಿಕ ಹಿನಲೆಯಿಂದ ಬಂದ ಲಕ್ಷಾಂತರ ಜನರನ್ನು ಒಗ್ಗುಡಿಸಿದೆ? ಧ್ಯೆಯ ಮತ್ತು ಸಂದೇಶಗಳಿಗೆ ಮಾತ್ರವಲ್ಲದೆ ಸಭೆಯ ಐಕ್ಯತೆಗೆ ತತ್ವಗಳು ಎಷ್ಟು ಮುಖ್ಯವೆಂಬುದನ್ನು ಇದು ನಮಗೆ ತಿಳಿಸುತ್ತದೆ?

3. ಸವೆಂತ್–ಡೇ–ಅಡ್ವೆಂಟಿಸ್ಟ್ ಹೆಸರೇ ಎರಡು ಮುಖ್ಯವಾಧ ಬೋಧನೆಯನ್ನು ಸೂಚಿಸುತ್ತದೆ

   a) ಏಳನೇ ದಿನ ಸಬ್ಬತ್ತು ಎಂಬುದು

   b) ಕ್ರಿಸ್ತನ ಎರಡನೇ ಬರೋಣ

   ಹೆಸರಿನ ಒಂದು ಭಾಗವು ಸೃಷ್ಟಿಯನ್ನು ಸೂಚಿಸುತ್ತದೆ ,ಮತ್ತೊಂದು ರಕ್ಷಣೆಯ ಬಗ್ಗೆ. ಈ ಎರಡು ಬೋಧನೆಗಳು ಹೇಗೆ ಸಂಬಂಧ ಹೊಂದಿವೆ, ಯಾವ ರೀತಿಯಲ್ಲಿ ಈ ಎರಡು ನಾವು ಯಾರೆಂಬುದನ್ನು ಸಂಕ್ಷಿಪ್ತವಾಗಿ ಸೆರೆಹಿಡಿದಿದೆ?

**ಸಾರಾಂಶ**: ಸವೆಂತ್–ಡೇ–ಅಡ್ವೆಂಟಿಸ್ಟ್‌ರು ಅನೇಕ ಸಾಮಾನ್ಯ ಮೂಲ ನಂಬಿಕೆಗಳನ್ನು ಎತ್ತಿ ಹಿಡಿದಿದ್ದಾರೆ ಕೆಲವನ್ನು ನಾವು ಬೇರೆ ಕ್ರೈಸ್ತರೊಂದಿಗೆ ಒಂದುಗೂಡಿ ಎತ್ತಿಹಿಡಿದಿದ್ದೇವೆ. ಒಟ್ಟಾರೆ ತೆಗೆದುಕೊಂಡರೆ ಈ ಬೋಧನೆಗಳಿಂದ ನಮ್ಮ ಸಭೆಯ ವಿಶೇಷವಾದದು ಎಂದು ಗುರುತ್ತಿಲ್ಪಟ್ಟಿದೆ ಮತ್ತು ಕ್ರೈಸ್ತನಲ್ಲಿ ನಮ್ಮ ಐಕ್ಯತೆಗೆ ಮೂಲವಾಗಿವೆ.